ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

21

ಇಲಾಖೆ / ವಿಷಯ : DEPARTMENT / SUBJECT: ಸಚಿವ ಸಂಪುಟ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ

ದಿನಾಂಕ : DATE 23/1/21

# ಅತೃಪ್ತ ಸಚಿವರು ಈಗ ಸಂತೃಪ್ತರು



**ಬಿಎಸ್‌ವೈ ಸಂಧಾನ ಫಲಶ್ರುತಿ**

23/1/21

ಸಂ.ಕ. ಸಮಾಚಾರ ಬೆಂಗಳೂರು

ನಿರೀಕ್ಷಿಸಿದ ಖಾತೆ ಸಿಗದ ಕಾರಣ ಕೆಲವು ಸಚಿವರು ಮುನಿಸಿಕೊಂಡಿರುವ ಹಿನ್ನೆಲೆಯಲ್ಲಿ ಕೆಲವು ಸಚಿವರ ಖಾತೆಗಳನ್ನು ಬದಲಾವಣೆ ಮಾಡಲಾಗಿದೆ. ಹೀಗಾಗಿ ಹಲಸಿಗ ಸಚಿವರ ಮುನಿಸು ಕೊನೆಗೂ ಮುಕ್ತಾಯಗೊಂಡಿದೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಶುಕ್ರವಾರ ಸಂಜೆ ಅತೃಪ್ತರನ್ನು ತಮ್ಮ ನಿವಾಸಕ್ಕೆ ಕರೆಸಿಕೊಂಡು ಮಾತನಾಡಿ, ವಿವಾದಕ್ಕೆ ಇತಿಶ್ರೀ ಹಾಡಿದ್ದಾರೆ.

ಗುರುವಾರವಷ್ಟೆ ನೂತನ ಸಚಿವರಿಗೆ ಖಾತೆ ಹಂಚಿಕೆ ವೇಳೆ ಕೆಲವು ಸಚಿವರ ಖಾತೆಗಳನ್ನು ಬದಲಾವಣೆ ಮಾಡಲಾಗಿತ್ತು. ಇದರಿಂದ ಕೆಲ ಹಳೆಯ ಸಚಿವರು ಮುನಿಸಿಕೊಂಡಿದ್ದರೆ, ಹೊಸದಾಗಿ ಮಂತ್ರಿಯಾಗಿರುವವರೂ ಕೂಡ ಕೊಟ್ಟ ಖಾತೆಗೆ ತೃಪ್ತರಾಗಿಲ್ಲ. ಹೀಗಾಗಿ ಅಸಮಾಧಾನಕ್ಕೆ ತೆರೆ ಎಳೆಯಲು ಸಿಎಂ ಯಡಿಯೂರಪ್ಪ ಕೆಲವು ಸಚಿವರ ಒತ್ತಡಕ್ಕೆ ಮಣಿದು ಖಾತೆ ಬದಲಾವಣೆ ಮಾಡಿದ್ದಾರೆ. ಖಾತೆ ಬದಲಾವಣೆಗೆ ರಾಜ್ಯಪಾಲರೂ ಅಂಕಿತ ಹಾಕಿದ್ದಾರೆ.

ಸಣ್ಣ ನೀರಾವರಿ ಖಾತೆಯನ್ನು ಹಿಂಪಡೆದಿದ್ದರಿಂದ ಮುನಿಸಿಕೊಂಡಿದ್ದ ಜೆ.ಸಿ.ಮಾಧುಸ್ವಾಮಿಗೆ ಹೆಚ್ಚುವರಿಗೆ ಹಜ್ ಮತ್ತು ವಕ್ಫ್ ಖಾತೆಯನ್ನು ನೀಡಲಾಗಿದೆ. ಅಬಕಾರಿ ಖಾತೆ ಬೇಡ ಎಂದು ಪಟ್ಟು ಹಿಡಿದಿದ್ದ ಎಂಟಿಬಿಗೆ ಪೌರಾಡಳಿತ ಹಾಗೂ ಸಕ್ಕರೆ ಖಾತೆ ಜವಾಬ್ದಾರಿ ಕೊಡಲಾಗಿದೆ. ಆರ್.ಶಂಕರ್‌ಗೆ ತೋಟಗಾರಿಕೆ ಜೊತೆಗೆ ರೇಷ್ಮೆ ಹಾಗೂ ಕೆ.ಸಿ. ನಾರಾಯಣಗೌಡ ಅವರಿಗೆ ಹೆಚ್ಚುವರಿಗೆಯಾಗಿ ಯೋಜನೆ ಕಾರ್ಯಕ್ರಮ, ಉಸ್ತುವಾರಿ ಹಾಗೂ ಅಂಕಿಸಂಖ್ಯೆ ಖಾತೆಗಳನ್ನು ನೀಡಲಾಗಿದೆ. ಆಹಾರ ಖಾತೆ ಹಿಂಪಡೆದಿದ್ದರಿಂದ ಮುನಿಸಿಕೊಂಡಿದ್ದ ಗೋಪಾಲಯ್ಯ ಅವರಿಗೆ ಅಬಕಾರಿ ಖಾತೆ ನೀಡಲಾಗಿದೆ.

ವೈದ್ಯಕೀಯ ಶಿಕ್ಷಣ ಖಾತೆ ಯನ್ನು ಹಿಂಪಡೆದಿರುವುದಕ್ಕೆ ಮುನಿಸಿಕೊಂಡಿರುವ ಡಾ.ಕೆ.ಸುಧಾಕರ್ ಅವರಿಗೆ ಒಂದೇ ಖಾತೆ ಸೀಮಿತವಾಗಲಿದೆ. ಅವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವರಾಗಿ ಮುಂದುವರಯಲಿದ್ದಾರೆ. ಈ ಎಲ್ಲ ಬೆಳವಣಿಗೆ ಬಳಿಕವೂ ಸಚಿವರಾದ ಡಾ.ಸುಧಾಕರ್, ಎಂಟಿಬಿ ನಾಗರಾಜ್, ಗೋಪಾಲಯ್ಯ, ನಾರಾಯಣಗೌಡ ಹಾಗೂ ಶಂಕರ್ ತೃಪ್ತರಾಗಿರಲಿಲ್ಲ. ಅತೃಪ್ತರು ಸರ್ಕಾರಿ ಕಾರು ಬಳಸದೇ ಖಾಸಗಿ ಕಾರ್‌ನಲ್ಲಿ ಓಡಾಡುತ್ತಿದ್ದರು. ಶುಕ್ರವಾರ ಸಂಜೆ ಎಲ್ಲ ಸಚಿವರನ್ನು ಕರೆಸಿ ಮಾತನಾಡಿದ ಸಿಎಂ ಯಡಿಯೂರಪ್ಪ ಎರಡು ತಿಂಗಳವರೆಗೆ ಕಾದು ನೋಡಿ. ಸಮಾಧಾನ ಆಗದಿದ್ದರೆ ಆಗ ಖಾತೆ ಬದಲಿಸೋಣ ಎಂಬ ಭರವಸೆ ಮೇರೆಗೆ ಎಲ್ಲರೂ ಒಪ್ಪಿಕೊಂಡಿದ್ದಾರೆ.

ಈ ಮಧ್ಯೆ ಅರಣ್ಯ ಸಚಿವ ಅರವಿಂದ ಲಿಂಬಾವಳಿಗೆ ಹೆಚ್ಚುವರಿಯಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹೊಣೆಗಾರಿಕೆಯನ್ನು ಕೊಡಲಾಗಿದೆ.



**ಅರವಿಂದ್ ಲಿಂಬಾವಳಿ**
**ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ**



**ಗೋಪಾಲಯ್ಯ**
**ಅಬಕಾರಿ**



**ಆರ್ ಶಂಕರ್**
**ತೋಟಗಾರಿಕೆ ಮತ್ತು ರೇಷ್ಮೆ**



**ಮಾಧುಸ್ವಾಮಿ**
**ವೈದ್ಯಕೀಯ ಶಿಕ್ಷಣ, ಹಜ್ ಮತ್ತು ವಕ್ಫ್**



**ಎಂಟಿಬಿ ನಾಗರಾಜ್**
**ಪೌರಾಡಳಿತ ಹಾಗೂ ಸಕ್ಕರೆ**



**ನಾರಾಯಣ ಗೌಡ**
**ಯುವ ಜನ ಸಬಲೀಕರಣ– ಕ್ರೀಡೆ, ಸಾಂಖ್ಯಿಕ, ಯೋಜನೆ ಅನುಷ್ಠಾನ**